ಓ ಅಲ್ಲಾಹ್, ನಾನೊಬ್ಬ ಮನುಷ್ಯ ಮಾತ್ರ. ಆದ್ದರಿಂದ ಮುಸ್ಲಿಮರ ಪೈಕಿ ಯಾವ ವ್ಯಕ್ತಿಯನ್ನಾದರೂ ನಾನು ಬೈದಿದ್ದರೆ, ಅಥವಾ ಶಪಿಸಿದ್ದರೆ, ಅಥವಾ (ಚಾವಟಿಯಿಂದ) ಹೊಡೆದಿದ್ದರೆ, ಅದನ್ನು ಅವನಿಗೆ ಶುದ್ಧೀಕರಣ ಮತ್ತು ಕರುಣೆಯನ್ನಾಗಿ ಮಾಡು

ಅಬೂ ಹುರೈರಾ (ಅಲ್ಲಾಹು ಅವರ ಬಗ್ಗೆ ಸಂಪ್ರೀತನಾಗಲಿ) ರಿಂದ ವರದಿ: ಅಲ್ಲಾಹನ ಸಂದೇಶವಾಹಕರು
(ಅವರ ಮೇಲೆ ಅಲ್ಲಾಹನ ಕೃಪೆ ಮತ್ತು ಶಾಂತಿಯಿರಲಿ) ಹೇಳಿದರು: "ಓ ಅಲ್ಲಾಹ್, ನಾನೊಬ್ಬ ಮನುಷ್ಯ ಮಾತ್ರ. ಆದ್ದರಿಂದ ಮುಸ್ಲಿಮರ ಪೈಕಿ ಯಾವ ವ್ಯಕ್ತಿಯನ್ನಾದರೂ ನಾನು ಬೈದಿದ್ದರೆ, ಅಥವಾ ಶಪಿಸಿದ್ದರೆ, ಅಥವಾ (ಚಾವಟಿಯಿಂದ) ಹೊಡೆದಿದ್ದರೆ, ಅದನ್ನು ಅವನಿಗೆ ಶುದ್ಧೀಕರಣ ಮತ್ತು ಕರುಣೆಯನ್ನಾಗಿ ಮಾಡು."
[صحيح] [متفق عليه]

ಪ್ರವಾದಿಯವರು (ಅವರ ಮೇಲೆ ಅಲ್ಲಾಹನ ಕೃಪೆ ಮತ್ತು ಶಾಂತಿಯಿರಲಿ) ಹೀಗೆ ಪ್ರಾರ್ಥಿಸಿದರು: "ಓ ಅಲ್ಲಾಹ್, ನಾನು ಕೇವಲ ಒಬ್ಬ ಮನುಷ್ಯ. ಮನುಷ್ಯರಿಗೆ ಕೋಪ ಬರುವಂತೆ ನನಗೂ ಕೋಪ ಬರುತ್ತದೆ. ಆದ್ದರಿಂದ ನಾನು ಯಾವ ವಿಶ್ವಾಸಿಗೆ ತೊಂದರೆ ನೀಡಿದ್ದೇನೆಯೋ, ಅಥವಾ ಬೈದಿದ್ದೇನೆಯೋ, ಅಥವಾ ನಿಂದಿಸಿದ್ದೇನೆಯೋ, ಅಥವಾ ಶಪಿಸಿದ್ದೇನೆಯೋ (ನಿನ್ನ ಕರುಣೆಯಿಂದ ದೂರವಾಗಲಿ ಎಂದು ಪ್ರಾರ್ಥಿಸಿದ್ದೇನೆಯೋ), ಅಥವಾ ಚಾವಟಿಯಿಂದ ಹೊಡೆದಿದ್ದೇನೆಯೋ, ಅದನ್ನು ಅವನಿಗೆ ಶುದ್ಧೀಕರಣ, ಸಾಮೀಪ್ಯ, ಪರಿಶುದ್ಧಿ, ಪ್ರಾಯಶ್ಚಿತ್ತ ಮತ್ತು ನೀನು ತೋರುವ ಕರುಣೆಯನ್ನಾಗಿ ಮಾಡು."

http://www.sunnah.global/hadeeth/kn/show/65812